ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 17–07–2017**

## ಪತ್ರಿಕಾ ಆಮಂತ್ರಣ

**1. ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಇವರಿಂದ ಕನ್ನಡಭಾಷೆಯ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆ ನಂತರ ಪತ್ರಿಕಾಗೋಷ್ಠಿ:**

**ಪರಿಶೀಲನೆ ಇಲಾಖೆ : ವ್ಯವಸ್ಥಾಪಕ ನಿರ್ದೇಶಕರ ಕಚೇರಿ, "ಸಾರಿಗೆ ಭವನ" ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು.**

**ದಿನಾಂಕ: 18–07–2017 ಮಂಗಳವಾರ, ಸಮಯ: ಮಧ್ಯಾಹ್ನ 3.00 ಗಂಟೆಗೆ**

**ಪರಿಶೀಲನೆ ಇಲಾಖೆ : ವ್ಯವಸ್ಥಾಪಕ ನಿರ್ದೇಶಕರ ಕಚೇರಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ, ಶಾಂತಿನಗರ, ಬಿ.ಟಿ.ಎಂ.ಸಿ. ಕಟ್ಟಡ, ಬೆಂಗಳೂರು**

**ದಿನಾಂಕ: 18–07–2017 ಮಂಗಳವಾರ, ಸಮಯ: ಸಂಜೆ 4.00 ಗಂಟೆಗೆ**

## ಪತ್ರಿಕಾ ಪ್ರಕಟಣೆ

## 2015 ಮತ್ತು 2016 ಸಾಲಿನ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಗುಣಾತ್ಮಕ ಚಲನಚಿತ್ರಗಳ ಸಹಾಯಧನಕ್ಕಾಗಿ ಆಯ್ಕೆ ಸಮಿತಿ ರಚನೆ

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

2015 ಮತ್ತು 2016ನೇ ಕ್ಯಾಲೆಂಡರ್ ವರ್ಷದ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಗುಣಾತ್ಮಕ ಚಲನಚಿತ್ರಗಳನ್ನು ಸಹಾಯಧನಕ್ಕಾಗಿ ಆಯ್ಕೆ ಮಾಡಲು ಆಯ್ಕೆ ಸಲಹಾ ಸಮಿತಿಗಳನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2015 ನೇ ಸಾಲಿನ ಆಯ್ಕೆ ಸಲಹಾ ಸಮಿತಿಯ ಅಧ್ಯಕ್ಷರಾಗಿ ಶ್ರೀ ಪಿ. ಶೇಷಾದ್ರಿ, ಚಲನಚಿತ್ರ ನಿರ್ದೇಶಕರು ಹಾಗೂ ನಿರ್ಮಾಪಕರು ಹಾಗೂ ಶ್ರೀಮತಿ ಲತಾ ಹಂಸಲೇಖ, ಹಿನ್ನೆಲೆ ಗಾಯಕಿ. ಶ್ರೀ ಚಿಂದೋಡಿ ಬಂಗಾರೇಶ್. ಶ್ರೀ ಚಿಂದೋಡಿ ಬಂಗಾರೇಶ್. ಶ್ರೀ ಜಿ.ಹೆಚ್. ಚಂದ್ರಶೇಖರ್ (ಕೆ.ಎಸ್.ಡುಇ.ಎಲ್. ಚಂದ್ರು) ಹಿರಿಯ ರಂಗಕರ್ಮಿ. ಕುಮಾರಿ ಅಕ್ಷತಾ ಪಾಂಡವಪುರ, ಚಲನಚಿತ್ರ ನಟಿ ಹಾಗೂ ರಂಗಕರ್ಮಿ. ಶ್ರೀ ಶಶಿಧರ ಚಿತ್ರದುರ್ಗ, ಸಿನಿಮಾ ಪತ್ರಕರ್ತರು ಅವರುಗಳು ಸದಸ್ಯರಾಗಿರುತ್ತಾರೆ.

2016 ನೇ ಸಾಲಿನ ಆಯ್ಕೆ ಸಲಹಾ ಸಮಿತಿಯ ಅಧ್ಯಕ್ಷರಾಗಿ ಶ್ರಿ ಚಂದ್ರಶೇಖರ್ ಆಲೂರು, ಚಲನಚಿತ್ರ ವಿಮರ್ಶಕರು ಹಾಗೂ ಅಂಕರಣಕಾರರು ಹಾಗೂ ಶ್ರೀ ಕೃಷ್ಣೇಗೌಡ, ಹಿರಿಯ ಪೋಷಕ ನಟ ಹಾಗೂ ರಂಗಕರ್ಮಿ. ಶ್ರೀ ದೇವು ಪತ್ತಾರ, ಹಿರಿಯ ಪತ್ರಕರ್ತರು. ಶ್ರೀ ದೇವು ಪತ್ತಾರ, ಹಿರಿಯ ಪತ್ರಕರ್ತರು. ಶ್ರೀ ರಾಮದೇವ ರಾಕೆ, ಸಾಹಿತಿಗಳು ಹಾಗೂ ಪತ್ರಕರ್ತರು. ಶ್ರೀಮತಿ ಅಭಿನಯ, ಚಲನಚಿತ್ರ ನಟಿ. ಶ್ರೀ ಶ್ರೀನಿವಾಸ ಎಸ್. ಗುರ್ಜಾಲ, ಚಲನಚಿತ್ರ ನಟ ಅವರುಗಳು ಸದಸ್ಯರಾಗಿರುತ್ತಾರೆ.

ಎರಡೂ ವರ್ಷದ ಸಮಿತಿಗಳ ಸದಸ್ಯ ಕಾರ್ಯದರ್ಶಿಯಾಗಿ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ಅಥವಾ ಅವರ ಪ್ರತಿನಿಧಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಎಸ್‌ಎಂ:ಜೆಡಿ:ಜಿಪಿಆರ್**

# ರಾಷ್ಟ್ರಪತಿ ಚುನಾವಣೆ – ಮತದಾನ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಜುಲೈ 17 ರಂದು ವಿಧಾನಸೌಧ ಕೊಠಡಿ ಸಂಖ್ಯೆ 106 ರಲ್ಲಿ ಮತದಾನ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮ್ಯಯ, ಸಚಿವರು ಹಾಗೂ ವಿರೋಧ ಪಕ್ಷದ ನಾಯಕರು ಸೇರಿದಂತೆ ಒಟ್ಟು 224 ಶಾಸಕರು ಹಾಗೂ ಚಿಕ್ಕೋಡಿ ಸಂಸತ್ ಸದಸ್ಯ ಪ್ರಕಾಶ್ ಹುಕ್ಕೇರಿ ಅವರು ತಮ್ಮ ಮತವನ್ನು ಚಲಾಯಿಸಿದರು.

ಇಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆವರೆಗೆ ಮತದಾನ ನೆಡೆಯಿತು ಎಂದು ಸಹಾಯಕ ಚುನಾವಣಾಧಿಕಾರಿ ಎಸ್.ಮೂರ್ತಿ ಅವರು ತಿಳಿಸಿದರು.

ಎಸ್‌ಎಂ:ಜೆಡಿ:ಜಿಪಿಆರ್

# ಜುಲೈ 19 ಹಾಗೂ 20 ರೊಳಗೆ ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 17–12–2016 , 21–01–2017 ಮತ್ತು 22–02–2017 ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಗಳಲ್ಲಿ ಸ್ನಾತಕೋತ್ತರ ಪದವೀಧರ ಕನ್ನಡ ಶಿಕ್ಷಕರು, ಇಂಗ್ಲೀಷ್ ಶಿಕ್ಷಕರು, ಹಿಂದಿ ಶಿಕ್ಷಕರು, ಸಮಾಜ ವಿಜ್ಞಾನ ಶಿಕ್ಷಕರು, ಗಣಿತ ಶಿಕ್ಷಕರು, ಗಣಕಯಂತ್ರ ಶಿಕ್ಷಕರು, ಗ್ರಂಥಪಾಲಕರು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಗ್ರಂಥಪಾಲಕರು, ಪೌರಾಡಳಿತ ನಿರ್ದೇಶನಾಲಯದಲ್ಲಿನ ಕಿರಿಯ ಅಭಿಯಂತರರು ಎಲೆಕ್ಟ್ರಿಕಲ್, ಕಿರಿಯ ಆರೋಗ್ಯ ನಿರೀಕ್ಷಕರು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಗಾಗಿ ದಿನಾಂಕ 28–05–2017. 29–05–2017 ಮತ್ತು 31–05–2017 ರಂದು ಬೆಂಗಳೂರು, ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ನಿರ್ದಿಷ್ಠ ಪತ್ರಿಕೆಯ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆ (Degree Standard) ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲ “http://kpsc.kar.nic.in/key answers” ನಲ್ಲಿ ದಿನಾಂಕ: 12–07–2017 ಮತ್ತು 13–07–2017 ರಂದು ಪ್ರಕಟಿಸಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಠೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪ್ರಕಾಶನದ ಪ್ರತಿ, ವಿಷಯ ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ ರೂ 50 ಶುಲ್ಕದೊಂದಿಗೆ (ಐಪಿಓ/ಡಿಡಿ ಮೂಲಕ)" ಇವರಿಗೆ ನಿಗದಿತ ನಮೂನೆಯಲ್ಲಿ ದಿನಾಂಕ: 19–07–2017 ದಿನಾಂಕ : 29–05–2017 ರಂದು ನಡೆಸಿದ ನಿರ್ದಿಷ್ಟ ಪತ್ರಿಕೆಯ ಕೀ–ಉತ್ತರಗಳಿಗೆ ಆಕ್ಷೇಪಣೆ ಸಲ್ಲಿಸಲು ದಿನಾಂಕ: 20–07–2017 ರೊಳಗೆ (ಕಚೇರಿ ವೇಳೆಯಲ್ಲಿ) ಲಿಖಿತ ಮನವಿ ಮೂಲಕ (ದ್ವಿಪ್ರತಿಯಲ್ಲಿ) ಸಲ್ಲಿಸಬಹುದಾಗಿದೆ. ದಿನಾಂಕ: 19–07–2017/20–07–2017 ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಎರಡು ಸೀಟು ಮೀಸಲು

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ನವದೆಹಲಿ ಇವರು ಐ.ಸಿ.ಸಿ.ಆರ್. ಕೋಟಾ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಪ್ರಕರಣದಡಿ ಪ್ರವೇಶ ಕಲ್ಪಿಸಿದಂತೆಯೇ ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಪ್ರವೇಶಾತಿ ಪರಿಗಣಿಸಿ 2017–18 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಿಇಟಿ ಮುಖಾಂತರ ಹಂಚಲ್ಪಡುವ ಸರ್ಕಾರಿ ಕೋಟಾ ಸೀಟುಗಳಲ್ಲಿ ಎರಡು ಸೀಟುಗಳನ್ನು ಮೀಸಲಿರಿಸಿದೆ.

ಇದರನ್ವಯ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಳ್ಳಾರಿ  ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿ ತಲಾ ಒಂದು ಸೀಟನ್ನು ಕಾಯ್ದಿರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## "CELEBRATION OF THE MONTH" Birth Anniversary of Robert Hooke

Bengaluru,  August 17 (Karnataka Information)

Jawaharlal Nehru Planetarium, on the occasion of birth anniversary of Robert Hooke is hosting a new programme titled the 'Celebration of the Month' on July 18th between 10.30 am to 12.30 pm at Jawaharlal Nehru Planetarium, Sri T. Chowdiah Road, High Grounds, Bengaluru.

This programme is introduced to benefit teachers which will be discussing on Robert Hooke's contribution in the fields of Physics, Biology and Astronomy.

For further details contact : 22203234 and 22379725 info@taralaya.org Website : http://www.taralaya.org/announcements.php.

sm/jd/gpr.

## Appointment

Bengaluru, August 17 (Karnataka Information)

Dr. M.K. Ramesh, Registrar (Evaluation) Rajiv Gandhi University of health sciences is appointed as acting vice chancellor with effect from 14-07-2017 until a regular vice chancellor is appointed or until further orders.

sm/jd/gpr.

## ಆರೋಗ್ಯ ವಿವಿಗೆ ಹಂಗಾಮಿ ಕುಲಪತಿ

ಬೆಂಗಳೂರು, ಆಗಸ್ಟ್ 17 (ಕರ್ನಾಟಕ ವಾರ್ತೆ)

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ (ಮೌಲ್ಯಮಾಪನ) ಡಾ. ಎಂ.ಕೆ. ರಮೇಶ್ ಅವರನ್ನು ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯಾಗಿ ನೇಮಕ ಮಾಡಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

## ಗೆಜೆಟೆಡ್ ಪ್ರೊಬೇಷನರ್ಸ್

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2015 ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ 401 ನೇಮಕಾತಿಗೆ ದಿನಾಂಕ 12-5-2017 ರ ಅಧಿಸೂಚನೆ ಹಾಗೂ ದಿನಾಂಕ 12-6-2017 ರ ಸೇರ್ಪಡೆ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಒಟ್ಟು 36 (ಮೂಲ ವೃಂದ) ಸಹಾಯಕ ಆಯುಕ್ತರ ಹುದ್ದೆಗಳ ಸರ್ಕಾರದ ದಿನಾಂಕ 13-7-2017 ರ ಪ್ರಸ್ತಾವನೆಯಂತೆ ಇನ್ನು 05 ಹುದ್ದೆಗಳನ್ನು ಸೇರಿಸಿ ಸೇರ್ಪಡೆ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಸೇರ್ಪಡೆ ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಡಾ. ಬಿ.ಆರ್. ಅಂಬೇಡ್ಕರ್ ವಿಚಾರಗಳ ಚಿಂತನ – ಮಂಥನ ಕುರಿತ ಎರಡು ದಿನಗಳ ಕಮ್ಮಟ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಸ್ಮಾರಕ ಕೇಂದ್ರ ಸ್ಫೂರ್ತಿಧಾಮ ಇವರ ಸಂಯುಕ್ತಾಶ್ರಯದಲ್ಲಿ ಜುಲೈ 19 ಮತ್ತು 20 ರಂದು ಮಾಗಡಿ ರಸ್ತೆಯ ಅಂಜನಾನಗರದ ಸ್ಫೂರ್ತಿಧಾಮದಲ್ಲಿ "ಎಲ್ಲರಿಗಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್" ಎಂಬ ಘೋಷವಾಕ್ಯದೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ವಿಚಾರಗಳ ಚಿಂತನ-ಮಂಥನ ಕುರಿತ ಎರಡು ದಿನಗಳ ಕಮ್ಮಟವನ್ನು ಹಮ್ಮಿಕೊಂಡಿದೆ.

ಈ ಕಮ್ಮಟ ಉದ್ಘಾಟನಾ ಸಮಾರಂಭದಲ್ಲಿ ಕಮ್ಮಟ ನಿರ್ದೇಶಕ ಡಾ. ಸಿ.ಎಸ್. ದ್ವಾರಕಾನಾಥ್ ಅವರು ಆಶಯ ನುಡಿ ಮಾಡಲಿದ್ದಾರೆ. ಸ್ಫೂರ್ತಿಧಾಮ ಅಧ್ಯಕ್ಷ ಎಸ್. ಮರಿಸ್ವಾಮಿ ಅವರು ಉಪಸ್ಥಿತರಿರುವರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಆಡಳಿತಾಧಿಕಾರಿ ಅಶೋಕ್ ಎನ್. ಚಲವಾದಿ ಅವರು ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ.

ಎರಡು ದಿನಗಳ ಕಾಲ ನಡೆಯುವ ಈ ಕಮ್ಮಟದಲ್ಲಿ ವಿವಿಧ ಗೋಷ್ಠಿಗಳು ನಡೆಯಲಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕೀ ಉತ್ತರ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಪದವಿಪೂರ್ವ ಕಾಲೇಜುಗಳಲ್ಲಿನ ಭೌತಶಾಸ್ತ್ರ ಉಪನ್ಯಾಸಕರ ಹುದ್ದೆಗಳ ನೇಮಕಾತಿಗಾಗಿ ಮೇ 25 ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ ನಿರ್ದಿಷ್ಟ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲ "http://kpsc.kar.nic.in/Key Answers" ನಲ್ಲಿ ಜುಲೈ 15 ರಂದು ಪ್ರಕಟಿಸಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಠೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪ್ರಕಾಶನದ ಪ್ರತಿ, ವಿಷಯ, ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ ರೂ 50 ರ ಶುಲ್ಕದೊಂದಿಗೆ (ಐಪಿಒ/ಡಿಡಿ ಮೂಲಕ) "ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು – 560 001 " ಇವರಿಗೆ ನಿಗದಿತ ನಮೂನೆಯಲ್ಲಿ ಜುಲೈ 27 ರೊಳಗೆ (ಕಚೇರಿ ವೇಳೆಯಲ್ಲಿ) ಲಿಖಿತ ಮನವಿಯ ಮೂಲಕ (ದ್ವಿಪ್ರತಿಯಲ್ಲಿ) ಸಲ್ಲಿಸಬಹುದಾಗಿದೆ. ಜುಲೈ 24 ರ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್

## ಒಂದು ಮೊಟ್ಟೆಯ ಕಥೆ ಚಿತ್ರ ಪ್ರದರ್ಶನ ಹಾಗೂ ಸಂವಾದ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯ ವತಿಯಿಂದ ಜುಲೈ 18 ರಂದು ಸಂಜೆ 4 ಗಂಟೆಗೆ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ "ಒಂದು ಮೊಟ್ಟೆಯ ಕಥೆ" ಚಿತ್ರ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಚಿತ್ರದ ನಟ ಹಾಗೂ ನಿರ್ದೇಶಕ ರಾಜ್ ಬಿ. ಶೆಟ್ಟಿ, ನಿರ್ಮಾಪಕ ಪವನ್ ಕುಮಾರ್, ಸಾಹಿತಿ ಹಾಗೂ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ  ಎನ್.ಆರ್. ವಿಶುಕುಮಾರ್, ಪತ್ರಕರ್ತರಾದ ಜೋಗಿ, ಬಿ. ಗಣಪತಿ, ಸದಾಶಿವ ಶೆಣೈ ಹಾಗೂ ಒಂದು ಮೊಟ್ಟೆಯ ಕಥೆ ಚಿತ್ರತಂಡ ಪಾಲ್ಗೊಳಲಿದ್ದಾರೆ.

ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

**ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮತ್ತು ಚಿತ್ರ ವೀಕ್ಷಣೆಗೆ ಆಹ್ವಾನ ಪತ್ರಿಕೆ ಕಡ್ಡಾಯವಾಗಿದ್ದು, ಮೊದಲು ಬಂದವರಿಗೆ ಮೊದಲ ಆದ್ಯತೆ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.**